# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 45/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಗುರುರಾಜ್ ರಾವ್ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಹನುಮಂತ ರಾವ್ | **04.10.2023** | |
| **ವಯಸ್ಸು** | ಃ 53 **ವರ್ಷ** | | |
| **ವೃತ್ತಿ** | ಃ ಮುಖ್ಯ ಶಿಕ್ಷಕರು | **ಪ್ರಾ.ಸಾ.** | ಃ **04** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **05** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಸಂಸ್ಕೃತದಲ್ಲಿ ಎಂ.ಎ ವ್ಯಾಸಾಂಗ ಮತ್ತು ಕೆ.ಎಸ್.ಓ.ಯು ನಲ್ಲಿ ಬಿ.ಇಡಿ ಮತ್ತು ಪಿ.ಎಸ್.ಡಿ ಪದವಿ ಅಭ್ಯಾಸ ಮಾಡಿದ್ದೇನೆ. ಪ್ರಾರಂಭದಲ್ಲಿ ನಾನು ಸದ್ವಿದ್ಯಾ ಹೈ ಸ್ಕೂಲ್ ನಲ್ಲಿ 1 ವರ್ಷ ಸಂಸ್ಕೃತ ಶಿಕ್ಷಕನಾಗಿ ಕೆಲಸ ಮಾಡಿದ್ದೆ. ನಂತರ *1997* ರಲ್ಲಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಕಾಲೇಜಿಗೆ ಸಂಸ್ಕೃತ ಉಪನ್ಯಾಸಕನಾಗಿ ಕೆಲಸಕ್ಕೆ ಸೇರಿದ್ದೆ. ನಂತರ *1999* ರಲ್ಲಿ ಮೈಸೂರಿನ ವಿಶ್ವಚೇತನ ವಿದ್ಯಾಸಂಸ್ಥೆಯವರು ಕೆಲಸ ಖಾಲಿಯಿರುವುದಾಗಿ ಅರ್ಜಿ ಕರೆದಾಗ ನಾನು ಅರ್ಜಿ ಹಾಕಿದ್ದೆ ಮತ್ತು ನಾನು ಅಲ್ಲಿ ಕೆಲಸಕ್ಕೆ ಸೇರಿದ್ದೆ. ಆ ಕಾಲಕ್ಕೆ ಪರಶಿವಮೂರ್ತಿಯವರು ವಿಶ್ವಚೇತನ ಸಂಸ್ಕೃತ ಪಾಠಶಾಲೆಯ ಗೌರವ ಕಾರ್ಯದರ್ಶಿಯಾಗಿದ್ದರು ಮತ್ತು ಅವರೇ ಸಂಸ್ಥೆಯ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ಆ ಕಾಲಕ್ಕೆ ಮುನಿಸಿದ್ದೇಗೌಡರು ಸಂಸ್ಥೆಯ ಅಧ್ಯಕ್ಷರಾಗಿದ್ದರು. ಈಗ *2012* ರಿಂದ ನಾಗರಾಜು ಇವರು ಆ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ನಾನು ಕೆಲಸಕ್ಕೆ ಸೇರಿದಾಗ *2–3* ತಿಂಗಳಿಗೊಮ್ಮೆ ಸಭೆ ಮಾಡುತ್ತಿದ್ದರು. ಆ ಸಭೆಗಳ ಕಾಲಕ್ಕೆ ಸಂಸ್ಥೆಯ ಸೆಕ್ರೆಟರಿಯವರು

ಸಂಸ್ಥೆಯ ಅಭಿವೃದ್ಧಿ ಮತ್ತು ಯಾವ ರೀತಿ ಪಾಠ ಮಾಡಬೇಕು ಎಂದು ಹೇಳುತ್ತಿದ್ದರು. ನಾನು ಸೇರಿದಾಗಲೇ ಅದು ಅನುದಾನಿತ ಶಾಲೆ ಆಗಿತ್ತು. ಮಧ್ಯದಲ್ಲಿ ಆಡಳಿತ ಮಂಡಳಿಯವರು ಸಪೋರ್ಟ್ ಮಾಡದೇ ಇದ್ದುದ್ದರಿಂದ ಅನುದಾನ ನಿಂತುಹೋಗಿತ್ತು. ನಂತರ 2015 ರಲ್ಲಿ ವಿಶ್ವನಾಥ ಇವರು ನಾಯಕತ್ವ ವಹಿಸಿ ನಾನು ಎಲ್ಲಾ ಕೆಲಸ ಮಾಡಿಸುತ್ತೇನೆ ಎಂದು ಸರ್ಕಾರದಲ್ಲಿ ಓಡಾಡಿ ಪುನಃ ಅನುದಾನ ದೊರೆಯುವಂತೆ ಮಾಡಿದ್ದರು. ನಂತರ ಹಣಕಾಸಿನ ಕುರಿತು ವಿಶ್ವನಾಥ ಇವರಿಗೂ ಮತ್ತು ಪರಶಿವಮೂರ್ತಿಯವರಿಗೂ ಸ್ವಲ್ಪ ಭಿನ್ನಾಭಿಪ್ರಾಯ ಬಂದಿತ್ತು.

2. ಪುನಃ ಅನುದಾನ ದೊರೆತಾಗ ಪರಶಿವಮೂರ್ತಿಯವರು ತಿಂಗಳಿಗೆ ಸಂಬಳದಲ್ಲಿ ಇಷ್ಟು ಹಣ ನೀಡಬೇಕು ಎಂದು ವಿಶ್ವನಾಥ ಅಥವಾ ಪರಶಿವ ಇವರಿಗೆ ಹೇಳಿ ಕಳುಹಿಸುತ್ತಿದ್ದರು. 2018 ರಲ್ಲಿ ಬಾಕಿ ವೇತನದ ಹಣ ತಲಾ ಒಬ್ಬ ಒಬ್ಬ ಶಿಕ್ಷಕರಿಗೆ 5-6 ಲಕ್ಷ ರೂಪಾಯಿಯಷ್ಟು ಬಂದಿತ್ತು ಆದರೆ ಆ ಹಣವನ್ನು ವಿಶ್ವನಾಥ ಅವರು ಮ್ಯಾನೇಜ್ ಮೆಂಟ್ ಗೆ ಕೊಡಬೇಕು ಎಂದು ನಮ್ಮಿಂದ ಪಡೆದುಕೊಂಡಿದ್ದರು. ನಾನು ಪ್ರತಿ ತಿಂಗಳು 15,000/- ರೂಪಾಯಿ ಹಣವನ್ನು ವಿಶ್ವನಾಥ ಇವರಿಗೆ ಕೊಡುತ್ತಿದ್ದೆ. ಕೆಲವು ಬಾರಿ ಪರಶಿವ ಇವರಿಗೆ ಹಣ ಕೊಡುತ್ತಿದ್ದೆ ಕೆಲವೊಮ್ಮೆ ನಾವು ಹಣ ಕೊಟ್ಟ ಬಳಿಕವೂ ಪರಶಿವಮೂರ್ತಿಯವರು ಯಾಕೆ ಹಣ ಕೊಟ್ಟಿಲ್ಲ ಎಂದು ಫೋನ್ ಮಾಡಿ ಕೇಳುತ್ತಿದ್ದರು ಆಗ ನಾವು ಕೊಟ್ಟಿರುವ ಹಣ ತಲುಪುತ್ತಿಲ್ಲ ಏನೋ ಭಿನ್ನಾಭಿಪ್ರಾಯ ಇದೆ ಎಂದು ಗೊತ್ತಾಗುತ್ತಿತ್ತು. ನನ್ನೊಂದಿಗೆ ಬಾಲಚಂದ್ರ ಹೆಗ್ಡೆ ಮತ್ತು ಇತರರು ಟಿ.ನರಸೀಪುರ ವಿಶ್ವಚೇತನ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಮೊದಲಿಗೆ ಬಾಲಚಂದ್ರ ಹೆಗ್ಡೆಯವರು ಮೈಸೂರಿನ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಅವರು ಹಣವನ್ನು

ಸರಿಯಾಗಿ ಕೊಡಲಿಲ್ಲ ಎನ್ನುವ ಕಾರಣಕ್ಕೆ ಅವರನ್ನು ಟಿ.ನರಸೀಪುರ ವಿಶ್ವಚೇತನ ಶಾಲೆಗೆ ವರ್ಗಾವಣೆ ಮಾಡಿದ್ದರು.

3. ಶಾಲೆಗೆ ಸಂಬಂದಪಟ್ಟ ಸಭೆಗಳನ್ನು ನೀಲಕಂಠ ಸ್ವಾಮಿ ಮಠದಲ್ಲಿ ಮಾಡುತ್ತಿದ್ದರು. ಸಾಮಾನ್ಯವಾಗಿ ಆ ಸಭೆಗೆ ಎಲ್ಲಾ ಶಿಕ್ಷಕರನ್ನು ಕರೆಯುತ್ತಿದ್ದರು ಕೆಲವೊಮ್ಮೆ ಮುಖ್ಯ ಶಿಕ್ಷಕರನ್ನು ಮಾತ್ರ ಕರೆಯುತ್ತಿದ್ದರು. ಆ ಸಭೆಗಳಲ್ಲಿ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಜರಾಗುತ್ತಿದ್ದರು. ಆ ಸಭೆಗಳಲ್ಲಿ ಪರಶಿವಮೂರ್ತಿಯವರು ಪ್ರತಿ ತಿಂಗಳು ನಾವು ಕೊಡಬೇಕಾದ ಹಣವನ್ನು ಸರಿಯಾದ ಸಮಯಕ್ಕೆ ಕೊಡುತ್ತಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಆ ಕಾಲಕ್ಕೆ ವಿಶ್ವನಾಥ ಇವರು ಪರಶಿವಮೂರ್ತಿ ಇರುವ ವರೆಗೆ ಹೀಗೆ ಎಂದು ಗಲಾಟೆ ಮಾಡುತ್ತಿದ್ದರು. ಒಂದು ಬಾರಿ ವಿಶ್ವನಾಥ ಇವರು ಅವರನ್ನು ಕೊಲೆ ಮಾಡಬೇಕು ನಿಮ್ಮನ್ನು ಮನೆಗೆ ಬಂದು ಹೊಡೆದು ಸಾಯಿಸುತ್ತೇನೆ ಎಂದು ತುಂಬಾ ಗಲಾಟೆ ಮಾಡಿದ್ದರು ಆಗ ಉಳಿದ ಶಿಕ್ಷಕರೆಲ್ಲರೂ ಸೇರಿ ಅವರನ್ನು ಸಮಾಧಾನ ಮಾಡಿದ್ದೇವು. ಆ ಕಾಲಕ್ಕೆ ಅಧ್ಯಕ್ಷರು ಪರಶಿವಮೂರ್ತಿಯವರನ್ನು ಸಮಾಧಾನ ಮಾಡಿದ್ದರು. ನಂತರ ವಿಶ್ವನಾಥ ಇವರೇ ಪರಶಿವಮೂರ್ತಿಯವರನ್ನು ಕೊಲೆ ಮಾಡಿಸಿದ್ದಾರೆ ಎಂದು ಗೊತ್ತಾಗಿತ್ತು. ಸಭೆಗಳಲೆಲ್ಲಾ ದುಡ್ಡು ಕೇಳುತ್ತಿದ್ದರಿಂದ ಆ ದುಡ್ಡಿನ ವಿಷಯಕ್ಕೆ ಕೊಲೆಯಾಗಿರಬಹುದು ಎಂದು ನನ್ನ ಅಭಿಪ್ರಾಯ ಆದರೆ ಆ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ.

4. 2020 ರಲ್ಲಿ ನಡೆದ ಸಭೆಯಲ್ಲಿಯೇ ವಿಶ್ವನಾಥ ಇವರು ಪರಶಿವಮೂರ್ತಿಯವರಿಗೆ ನಿಮ್ಮನ್ನು ಮನೆಗೆ ಬಂದು ಹೊಡೆದು ಸಾಯಿಸುತ್ತೇನೆ ಎಂದು ಗಲಾಟೆ ಮಾಡಿದ್ದರು ಆದರೆ ಯಾವ ತಿಂಗಳಿನಲ್ಲಿ ನಡೆದ ಸಭೆಯಲ್ಲಿ ಆ ರೀತಿ ಗಲಾಟೆ

ಮಾಡಿದ್ದರು ಎಂದು ನೆನಪಿಲ್ಲ. ಈ ಎಲ್ಲಾ ವಿಷಯದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನಾನು ಪ್ರತಿ ತಿಂಗಳು ಕೊಡುತ್ತಿದ್ದ ಹಣವನ್ನು ನಗದು ರೂಪದಲ್ಲಿ ಕೊಡುತ್ತಿದ್ದೆ. ನಾನು ನ್ಯಾಯಾಧೀಶರ ಮುಂದೆ ಸಹ ಹೇಳಿಕೆ ಕೊಟ್ಟಿದ್ದೇನೆ. ಈ ಮೇಲೆ ಹೇಳಿದ ಎಲ್ಲಾ ವಿಷಯಗಳನ್ನು ನ್ಯಾಯಾಧೀಶರ ಮುಂದೆ ಸಹ ಹೇಳಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿರುವ ಸಹಿಗಳು ನನ್ನದೇ ಇವೆ. ಸದರಿ ಹೇಳಿಕೆಯನ್ನು ನಿ.ಪಿ-43 ಮತ್ತು ಸಹಿಗಳನ್ನು ನಿ.ಪಿ-43(ಎ) ರಿಂದ (ಸಿ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

5. ನಿಂತು ಹೋಗಿದ್ದ ಇಂಕ್ರಿಮೆಂಟ್ ಹಣವಾದ ತಲಾ 5-6 ಲಕ್ಷ ರೂಪಾಯಿ ಹಣವನ್ನು ನಮಗೆ ನೀಡದೇ ಪರಶಿವಮೂರ್ತಿ ಮತ್ತು ವಿಶ್ವನಾಥ ಇಟ್ಟುಕೊಂಡಿದ್ದರು ಎಂದರೆ ಸಂಸ್ಥೆಗೆ ಕೊಡಬೇಕು ಎಂದು ವಿಶ್ವನಾಥ ಇವರು ಪಡೆದುಕೊಂಡಿದ್ದರು. 2020 ರ ಜೂನ್ ತಿಂಗಳಿನಲ್ಲಿ ನಡೆದ ಸಭೆಯಲ್ಲಿ ಪರಶಿವಮೂರ್ತಿ ಮತ್ತು ವಿಶ್ವನಾಥ ಇವರಿಗೂ ಗಲಾಟೆ ನಡೆದಿತ್ತು ಎಂದರೆ ನಿಖರವಾದ ತಿಂಗಳು ನೆನಪಿಲ್ಲ. ಪರಶಿವಮೂರ್ತಿಯವರ ಕಿರುಕುಳ ತಾಳಲಾರದೇ ವಿಶ್ವನಾಥ ಮತ್ತು ಪರಶಿವ ಇವರು ಸಿದ್ದರಾಜು ಮತ್ತು ಇತರರೊಂದಿಗೆ ಸೇರಿಕೊಂಡು ಪರಶಿವಮೂರ್ತಿಯವರನ್ನು ಕೊಲೆ ಮಾಡಿಸಿದ್ದಾರೆ ಎಂದು ಈಗ ತಿಳಿಯಿತು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೆ ಎಂದರೆ ನಿಜ. ಹಲವಾರು ಬಾರಿ ನನಗೆ ಪರಶಿವಮೂರ್ತಿಯನ್ನು

ಕೊಲೆ ಮಾಡದೇ ಇದ್ದರೆ ನಮಗೆ ನೆಮ್ಮದಿ ಇಲ್ಲ ಎಂದು ವಿಶ್ವನಾಥ ನನಗೆ ಹೇಳಿರುತ್ತಾರೆ ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ. ಪರಶಿವಮೂರ್ತಿ ಕೊಲೆಯಾದ ಬಗ್ಗೆ ನನಗೆ ನಮ್ಮ ಸಂಸ್ಥೆಯ ಅಧ್ಯಕ್ಷರು ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಸದರಿ ವಿಶ್ವನಾಥ ಪರಶಿವ ಎನ್ನುವವರಿಗೆ ನೀನು ಪರಶಿವಮೂರ್ತಿಯನ್ನು ಕೊಲೆ ಮಾಡು ಎಂದು ಹಲವಾರು ಬಾರಿ ಅವರಿಗೆ ಹೇಳಿರುತ್ತಾರೆ ಎಂಬುದಾಗಿ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ತಮಾಷೆಗೆ ಆ ರೀತಿ ಹೇಳುತ್ತಿದ್ದರು.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

6. 1999 ರಿಂದಲೇ ವಿಶ್ವಚೇತನ ವಿದ್ಯಾಸಂಸ್ಥೆ ಅನುದಾನಿತ ವಿದ್ಯಾಸಂಸ್ಥೆಯಾಗಿತ್ತು. ಶಿಕ್ಷಕರಿಗೆ ಬರಬೇಕಾದ ವೇತನ ಮತ್ತು ಭತ್ಯೆ ಶಿಕ್ಷಕರ ಬ್ಯಾಂಕ್ ಖಾತೆಗಳಿಗೆ ಮತ್ತು ಸಂಸ್ಥೆಗೆ ಬರಬೇಕಾದ ಹಣ ಸಂಸ್ಥೆಯ ಬ್ಯಾಂಕ್ ಖಾತೆಗೆ ಬರುತ್ತಿತ್ತು ಎಂದರೆ ನಿಜ. ಶಿಕ್ಷಕರಿಂದ ಬಲವಂತವಾಗಿ ಹಣ ಪಡೆಯಲು ಬರುವುದಿಲ್ಲ ಎಂದರೆ ಅವರು ಕೇಳುತ್ತಿದ್ದರು ನಾವು ಕೊಡುತ್ತಿದ್ದೇವು. 1995-96 ರಿಂದ ಪ್ರಾರಂಭವಾದ ಅನುದಾನ ಪರಶಿವಮೂರ್ತಿಯವರು ಮರಣಹೊಂದುವವರೆಗೆ ನಿರಂತರವಾಗಿ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಮದ್ಯೆ ಸ್ವಲ್ಪ ದಿನ ನಿಂತಿತ್ತು. ಮ್ಯಾನೇಜ್ ಮೆಂಟ್ ಮತ್ತು ಶಿಕ್ಷಕರ ಮದ್ಯೆ ಭಿನ್ನಾಭಿಪ್ರಾಯದ ಕಾರಣಕ್ಕೆ ಸ್ವಲ್ಪ ದಿನ ಅನುದಾನ ರದ್ದಾಗಿತ್ತು. ಆ ಕಾಲಕ್ಕೆ ನಾನು ಶಿಕ್ಷಕರ ಕಡೆಯಿಂದ ಅನುದಾನ ಪುನಃ ಪಡೆಯಲು ಪ್ರಯತ್ನ ಮಾಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ವಿಶ್ವನಾಥ ಇವರೇ ಪುನಃ ಅನುದಾನ ಪಡೆಯಲು ಪ್ರಯತ್ನ ಮಾಡಿದ್ದರು. ಆ ಕಾಲಕ್ಕೆ ವಿಶ್ವನಾಥ

ಇವರನ್ನು ಶಿಕ್ಷಕರ ಕಡೆಯಿಂದ ಕಾರ್ಯದರ್ಶಿಯಾಗಿ ನೇಮಿಸಿದ್ದರು. ವಿಶ್ವಚೇತನ ಸಂಸ್ಥೆಯಲ್ಲಿ ಶಿಕ್ಷಕರ ಸಂಘ ಇರಲಿಲ್ಲ. ನಾವು ಯಾರು ವಿಶ್ವನಾಥ ಇವರನ್ನು ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ನೇಮಿಸಿರಲಿಲ್ಲ. ವಿಶ್ವನಾಥ ಸಹ ನನ್ನಂತೆಯೇ ಒಬ್ಬ ಉದ್ಯೋಗಿ ಎಂದರೆ ನಿಜ.

*7.* ಪರಶಿವಮೂರ್ತಿ, ನಾಗರಾಜು ಮತ್ತು ಇತರೇ ಬೊರ್ಡ್ ಆಫ್ ಡೈರೆಕ್ಟರ್ ಗಳು ಸಂಸ್ಥೆಯನ್ನು ನಡೆಸುತ್ತಿದ್ದರು ಎಂದರೆ ನಿಜ. ಸಂಸ್ಥೆ ಆಡಳಿತದಲ್ಲಿ ವಿಶ್ವನಾಥ ಇವರಿಗೆ ಯಾವುದೇ ಜವಾಬ್ದಾರಿ ಇರಲಿಲ್ಲ ಎಂದರೆ ನಿಜ. ಸಂಸ್ಥೆಯನ ಆಡಳಿತ ಮಂಡಳಿಯವರೇ ಸಂಸ್ಥೆಯ ಲಾಭ ನಷ್ಟಕ್ಕೆ ಜವಾಬ್ದಾರಿ ಎಂದರೆ ನಿಜ. ಮುಖ್ಯ ಶಿಕ್ಷಕರಿಗೆ ಇಂತಿಷ್ಟು ಲಾಭ ಎಂದು ವಿಶ್ವನಾಥ ಇವರಿಗೆ ಪರಶಿವಮೂರ್ತಿ ಅಥವಾ ನಾಗರಾಜು ಇವರು ಕೊಡುತ್ತಿರಲಿಲ್ಲ. ಶಿಕ್ಷಕರಿಂದ ಪಡೆದ ಹಣ ಎಲ್ಲಿ ಹೋಗುತ್ತಿತ್ತು ಯಾರಿಗೆ ತಲುಪುತ್ತಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪರಶಿವಮೂರ್ತಿ ಮತ್ತು ನಾಗರಾಜು ಇವರು ಸಂಸ್ಥೆಯಲ್ಲಿ ತಮ್ಮದೇ ಗುಂಪು ರಚಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಂಸ್ಥೆಯಲ್ಲಿ ಈ ರೀತಿ ನಡೆಯುತ್ತಿದೆ ಎನ್ನುವ ಬಗ್ಗೆ ನಾನು ಬೇರೆ ಬೊರ್ಡ್ ಆಫ್ ಡೈರೆಕ್ಟರ್ ಗಳಿಗೆ ದೂರನ್ನು ಕೊಟ್ಟಿರಲಿಲ್ಲ. ಶಿಕ್ಷಕರಿಂದ ಹಣ ಪಡೆಯುತ್ತಿದ್ದ ಬಗ್ಗೆ ನಾವು ದೂರನ್ನು ಕೊಟ್ಟಿಲ್ಲ. ಆ ಕುರಿತು ಬೋರ್ಡ್ ಮೀಟಿಂಗ್ ನಲ್ಲಿ ಚರ್ಚೆ ಆದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಶಿಕ್ಷಕರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವುದು ಮತ್ತು ಶಿಕ್ಷಕರಿಗೆ ನಿರ್ದೇಶನ ಕೊಡುವುದು ನಾಗರಾಜು ಮತ್ತು ಪರಶಿವಮೂರ್ತಿಯವರಿಗೆ ಸೇರಿದ್ದು ಎಂದರೆ ನಿಜ. ಪರಶಿವಮೂರ್ತಿಯವರು ಕಿರುಕುಳ

ಕೊಡುತ್ತಿದ್ದ ಬಗ್ಗೆ ನಾನು ದೂರು ಕೊಟ್ಟಿಲ್ಲ. ಪರಶಿವಮೂರ್ತಿಯವರು ವಿಶ್ವನಾಥನಿಂದ ನನಗೆ ತೊಂದರೆಯಾಗಿದೆ ನನ್ನನ್ನು ಸಾಯಿಸುತ್ತಾರೆ ಎಂದು ದೂರು ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿಲ್ಲ.

8. ಸಂಸ್ಥೆಗೆ ಸ್ವಂತ ಕಟ್ಟಡ ಹೊಂದುವ ಸಲುವಾಗಿ ಮೈಸೂರು ಮತ್ತು ಟಿ.ನರಸೀಪುರದಲ್ಲಿ ಕಟ್ಟಡಕ್ಕಾಗಿ ಹುಡುಕಾಟ ನಡೆಸಿದ್ದರು. ಪರಶಿವಮೂರ್ತಿಯವರೇ ಆ ರೀತಿ ಹುಡುಕಾಟ ನಡೆಸಿದ್ದರು ಎಂದರೆ ನಿಜ. ವಿಶ್ವನಾಥ ಇವರು ಪರಶಿವಮೂರ್ತಿಯವರಿಗೆ ಬೆದರಿಕೆ ಹಾಕಿದ್ದ ಸಭೆ ಯಾವ ದಿನಾಂಕ ಮತ್ತು ತಿಂಗಳು ನಡೆದಿತ್ತು ಎಂದು ನೆನಪಿಲ್ಲ. ಆ ರೀತಿ ಬೆದರಿಕೆ ಹಾಕಿದ್ದ ಬಗ್ಗೆ ನಡವಳಿಕೆ ಪುಸ್ತಕದಲ್ಲಿ ನಮೂದು ಆಗಿತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಆ ಸಭೆ ಬಳಿಕ ವಿಶ್ವನಾಥಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಿಲ್ಲ. ಪರಶಿವಮೂರ್ತಿಯವರ ಕೊಲೆಯಾದ ದಿನವೇ ಬೆಳಗ್ಗೆ ನಾಗರಾಜು ಇವರು ನನಗೆ ಫೋನ್ ನಲ್ಲಿ ಆ ಬಗ್ಗೆ ತಿಳಿಸಿದ್ದರು. ಆ ಬಗ್ಗೆ ಗೊತ್ತಾದ ಬಳಿಕ ನಾನು ಪರಶಿವಮೂರ್ತಿಯವರ ಮನೆಗೆ ಹೋಗಿಲ್ಲ. ಕೊಲೆಯಾದ 2-3 ದಿನಕ್ಕೆ ನನ್ನನ್ನು ಪೋ.ಠಾಣೆಗೆ ಕರೆಸಿದ್ದರು. ಆ ಕಾಲಕ್ಕೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ಎಲ್ಲಾ ವಿಚಾರಗಳನ್ನು ಪೋಲೀಸರಿಗೆ ಹೇಳಿದ್ದೆ. ನನ್ನನ್ನು ಪೋ.ಠಾಣೆಗೆ ಕರೆಸಿದಾಗ ಪರಶಿವಮೂರ್ತಿಯವರ ಕೊಲೆ ಯಾರು ಮಾಡಿದ್ದಾರೆಂದು ಇನ್ನೂ ಗೊತ್ತಾಗಿರಲಿಲ್ಲ ಎಂದರೆ ನಿಜ. ಮೈಸೂರಿನ ಶಾಲೆ ಎನ್.ಆರ್.ಮೊಹಲ್ಲಾದಲ್ಲಿ ನಡೆಯುತ್ತಿತ್ತು. ಮಡಿವಾಳ ಸ್ವಾಮಿ ಸಂಸ್ಕೃತ ಪಾಠಶಾಲೆ ಎಲ್ಲಿ ನಡೆಯತ್ತಿತ್ತು ಎಂದು ಗೊತ್ತಿಲ್ಲ. ಮಡಿವಾಳ ಸ್ವಾಮಿ ಸಂಸ್ಕೃತ ಪಾಠಶಾಲೆಯ ಮುಖ್ಯಸ್ಥರು ನನಗೆ ಪರಿಚಯ ಇಲ್ಲ. ಮಡಿವಾಳ ಸ್ವಾಮಿ ಸಂಸ್ಕೃತ ಪಾಠಶಾಲೆಯ ಸಂಸ್ಥೆಗೂ ನಮ್ಮ ಸಂಸ್ಥೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. ವಿಶ್ವನಾಥ ಇವರು ಪರಶಿವಮೂರ್ತಿಯವರಿಗೆ ಬೈದ ಬಗ್ಗೆ ಮತ್ತು ಬೆದರಿಕೆ ಹಾಕಿದ್ದ ಬಗ್ಗೆ

ಪೋಲೀಸರು ಹೇಳಿ ಕೊಟ್ಟಂತೆ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಈಗ ವಿಶ್ವನಾಥ ಇವರು ಅಮಾನತ್ತಿನಲ್ಲಿದ್ದಾರೆ. ವಿಶ್ವನಾಥ ಇವರಿಗೆ ಸಂಸ್ಥೆ ಹಣದಿಂದಲಾಭವಾಗಿದೆ ಎನ್ನುವ ಬಗ್ಗೆ ದಾಖಲೆ ಇಲ್ಲ.

***2*ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು *2*ನೇ ಆರೋಪಿತ *1*ನೇ ಆರೋಪಿತ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

***5*ನೇ ಆರೋಪಿತ *1, 3,* ಮತ್ತು *4*ನೇ ಆರೋಪಿತ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

**ಪಾಟೀ ಸವಾಲುಃ *3* ಮತ್ತು *4* ನೇ ಆರೋಪಿತರ ಪರ ಶ್ರೀ ಸಿ.ಪಿ ವಕೀಲರಿಂದ**

9. ಆಡಳಿತ ಮಂಡಳಿಯವರು ಹಣಕೊಸ್ಕರ ಶಿಕ್ಷಕರಿಗೆ ಒತ್ತಾಯ ಮಾಡುತ್ತಿದ್ದ ಬಗ್ಗೆ ಆಡಳಿತ ಮಂಡಳಿಗೂ ಶಿಕ್ಷಕರಿಗೂ ಭಿನ್ನಾಭಿಪ್ರಾಯ ಇತ್ತು. ಆಡಳಿತ ಮಂಡಳಿಯವರೇ ಸರ್ಕಾರಕ್ಕೆ ಭಿನ್ನಾಭಿಪ್ರಾಯದ ಬಗ್ಗೆ ತಿಳಿಸಿದ್ದರಿಂದ ಕೆಲವು ದಿನ ಅನುದಾನ ರದ್ದಾಗಿತ್ತು. ಆಡಳಿತ ಮಂಡಳಿ ಎಲ್ಲಾ ಸದಸ್ಯರು ಸೇರಿ ಶಿಕ್ಷಕರೊಂದಿಗೆ ಸಭೆ ನಡೆಸುತ್ತಿರಲಿಲ್ಲ. ಆಡಳಿತ ಮಂಡಳಿ ಮತ್ತು ಶಿಕ್ಷಕರ ನಡುವಿನ ಭಿನ್ನಾಭಿಪ್ರಾಯ ಯಾವ ಸಭೆಯಲ್ಲಿ ಕೊನೆಯಾಗಿತ್ತು ಎಂದು ಗೊತ್ತಿಲ್ಲ. ಮ್ಯಾನೇಜ್ ಮೆಂಟ್ ಗೆ ಹಣ ಕೊಡಲು ಆಗುವುದಿಲ್ಲ ಎನ್ನುವ ಕುರಿತು ಚರ್ಚಿಸಲು ಶಿಕ್ಷಕರು ಯಾವತ್ತು ಸಭೆಯನ್ನು ಮಾಡಿಲ್ಲ. ಸಂಸ್ಥೆಯ ಪರವಾಗಿ ಓಡಾಡಲು ವಿಶ್ವನಾಥ ಇವರಿಗೆ ಅಧಿಕಾರ ಪತ್ರ ಕೊಟ್ಟಿರಲಿಲ್ಲ. ಬಾಕಿ ವೇತನದ ಹಣ *5-6* ಲಕ್ಷ ರೂಪಾಯಿಗಳನ್ನು *2018* ರಲ್ಲಿ ನಾನು ವಿಶ್ವನಾಥ ಇವರಿಗೆ ಕೊಟ್ಟಿದ್ದೆ ಆದರೆ ಯಾವ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ಆ ರೀತಿ ಶಿಕ್ಷಕರಿಂದ ಪಡೆದ ಹಣದ ಬಗ್ಗೆ ಯಾವುದೆ ದಾಖಲಾತಿಗಳನ್ನು ಇಟ್ಟಿರಲಿಲ್ಲ. ಸಭೆಗಳು ನಡೆದಾಗ ಸಭೆಯ ನಿರ್ಣಯಗಳನ್ನು ನಡಾವಳಿ ಪುಸ್ತಕದಲ್ಲಿ ನಮೂದು ಮಾಡುತ್ತಿರಲಿಲ್ಲ. *2020* ರ ಜೂನ್

ತಿಂಗಳಿನಲ್ಲಿ ಕೋವಿಡ್–19 ರ ಲಾಕ್ ಡಾನ್ ಜಾರಿಯಲ್ಲಿತ್ತು ಎಂದರೆ ನಿಜ. ಆ ಕಾಲಕ್ಕೆ ಶಾಲಾ ತರಗತಿಗಳು ನಡೆಯುತ್ತಿರಲಿಲ್ಲ ಎಂದರೆ ನಿಜ ಆನ್ ಲೈನ್ ತರಗತಿಗಳು ನಡೆಯುತ್ತಿತ್ತು. 2020 ರಲ್ಲಿ ಯಾವಾಗ ಶಾಲೆಗಳು ಪುನಾರಂಭವಾಗಿತ್ತು ಎಂದರೆ ನೆನಪಿಲ್ಲ.

10. ಕೋವಿಡ್ ಲಾಕ್ ಡಾನ್ ಕಾಲದಲ್ಲಿ ಸಭೆ ಸಮಾರಂಭ ನಡೆಸಲು ಸರ್ಕಾರದಿಂದ ಅನುಮತಿ ಪಡೆಯಬೇಕಿತ್ತು ಎಂದರೆ ನಿಜ. 2020 ರಲ್ಲಿ ನೀಲಕಂಠ ಸ್ವಾಮಿ ದೇವಸ್ಥಾನದಲ್ಲಿ ನಡೆದ ಸಭೆ ಕಾಲಕ್ಕೆ ಕೋವಿಡ್ ನಿರ್ಬಂದಗಳು ಇರಲಿಲ್ಲ. 2020 ರ ಜೂನ್ ನಲ್ಲಿ ಯಾವುದೇ ಸಭೆಗಳು ನಡೆದಿಲ್ಲ ಎಂದರೆ ಸರಿಯಲ್ಲ. ವಿಶ್ವನಾಥ ಇವರು ಯಾವತ್ತು ಪರಶಿವಮೂರ್ತಿಯವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ವಿಶ್ವನಾಥ ಮತ್ತು ಪರಶಿವ ನನ್ನಿಂದ ಯಾವತು ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಹಣ ಕೊಟ್ಟ ಬಗ್ಗೆ ಅವರಿಂದ ಯಾವುದೇ ದಾಖಲೆ ಪಡೆದಿಲ್ಲ. **2019** ರಲ್ಲಿ ಪರಶಿವಮೂರ್ತಿಯವರು ನನಗೆ ಹಣ ತಲುಪಿಲ್ಲ ಎಂದು ನನಗೆ ಫೋನ್ ಮಾಡಿ ಹೇಳಿದ್ದರು. ಆದಾದ ನಂತರವೂ ಸಹ ಹಣ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಈಗ ನಾಗರಾಜು ಇವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಪಾಟೀ ಸವಾಲುನ್ನು 1ನೇ ಆರೋಪಿತರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*